

**ಆರ್. ದಿಲೀಪ್ ಕುಮಾರ್**

ಕಲೆ: ವಿಶ್ವನಾಥ್ ಎ.ಎಸ್.

# ಬ್ರಹ್ಮಕಮಲದಂತಹವಳಿಗೆ ಹದಿನಾಕು ಮಾತು

1
ಮಂದ ಗಾಳಿ ತಾಕಿದ
ಬಗೆಗೆ ಬರೆಯಲು
ಸಂಜೆ ಬೆಳಗು ಹರಿವವರೆಗೂ ಕಾದೆ
ಬೆಂಕಿ ತಾಕಿದೆ
ಆರುತಲೇ ಇಲ್ಲ
ಪದಗಳೆಲ್ಲ ಬೂದಿಯಾಗಿವೆ
ಅನಿಸಿದೆ ಈಗೀಗ

2
ಮತ್ತೆ ನೆನಪಾಗುವ ಆ ಹಾದಿ
ಸವೆಸಿವೆ ಇಬ್ಬರನೂ
ಬಣ್ಣ ಬದಲಾಯಿಸಿದ ಹಾಗೆ
ಮರ
ಮೈ ತುಂಬ ಹತ್ತಿದಂತೆ ಚಿಗುರು
ಕೊರಡು ಕೊನರುವುದ ಕೇಳಿದ್ದೆ
ಮರ್ಮರದ ಶಬುದಗಳ
ಆಲಿಸುತಿರುವೆ ಈಗ

3
ಕೊನೆಗೆ
ರಸ್ತೆಯಂಚಿನಲಿ ನಿಂತು ಹಿಡಿದ ಕೈ
ಎಷ್ಟು ಭದ್ರವಿತ್ತು
ಮಾತು ಕತೆ ನಿಂತ ನಿಲವು
ಅಭದ್ರಗೊಂಡ ನನಗೂ
ಒಳಗೆ ಹಾರುವಂತೆ ಅನಿಸಿದ್ದು
ಸುಳ್ಳಲ್ಲ ಬಿಡು

